ಶುಭವಾರ್ತೆ 8

> ನನ್ನ ಆಜ್ಞೆಗಳನ್ನು ಹೊಂದಿ ಅವುಗಳನ್ನು ಕೈಕೊಂಡು ನಡೆಯುವವನೇ ನನ್ನನ್ನು ಪ್ರೀತಿಸುವವನು. — ಯೋಹಾನ 14:21.

## ಒಳ್ಳೆಯ ಕಾರ್ಯಗಳಷ್ಟೇ ಸಾಕೋ?

(ಹಿಂದಿನ ಸಂಚಿಕೆಯಿಂದ)

ಮಾನವ ವರ್ಗವು ವಾಸ್ತವವಾಗಿ ಎರಡು ಭಾಗಗಳಾಗಿ ವಿಭಾಗಿಸಲ್ಪಟ್ಟಿದೆ: ದೇವರ ಧರ್ಮಶಾಸ್ತ್ರಕ್ಕೆ ಹೊರತಾಗಿ ಪಾಪಮಾಡಿ ನಾಶವಾಗುವಂಥವರು (ಅದನ್ನು ತಿಳಿಯದೇ ಇದ್ದವರು) ಮತ್ತು ದೇವರ ಧರ್ಮಶಾಸ್ತ್ರಕ್ಕೆ ಒಳಗಾಗಿ ಪಾಪಮಾಡುವಂಥವರು. ಪೌಲನ 'ಸುವಾರ್ತೆ'ಯ ಸಾರುವಿಕೆಯಲ್ಲಿ ತಿಳಿಸಿದಂತೆ ಅವರು, ದೇವರು ಯೇಸುಕ್ರಿಸ್ತನ ಮೂಲಕ ಜನರ ಗುಟ್ಟುಗಳನ್ನು ಹಿಡಿದು ವಿಚಾರಿಸುವ ದಿನದಲ್ಲಿ ಅದರಿಂದಲೇ ತೀರ್ಪಿಗೊಳಗಾಗುತ್ತಾರೆ. (ರೋಮಾ 2:12,16 ನ್ನು ಅ.ಕೃ. 10:42 ರೊಂದಿಗೆ ಹೋಲಿಸಿ). ಎಲ್ಲರೂ — ಯೆಹೂದ್ಯರೂ ಮತ್ತು ಅನ್ಯಜನರೂ — ಎಲ್ಲರೂ ಪಾಪಮಾಡಿ ದೇವರಿಗೆ ಮಹಿಮೆಯನ್ನು ಸಲ್ಲಿಸಲಾರದವರಾದ್ದರಿಂದ ಪಾಪಕ್ಕೆ ಒಳಬಿದ್ದವರಾಗಿದ್ದು ಮರಣದ ಶಿಕ್ಷೆಗೊಳಗಾಗಿದ್ದಾರೆ. (ರೋಮಾ 3:19,23). ದೇವರ ಧರ್ಮಶಾಸ್ತ್ರವು ನಿಜವಾಗಿಯೂ ನಾವು ಆತನ ಮುಂದೆ ಎಷ್ಟರ ಮಟ್ಟಿಗೆ ಪಾಪಿಗಳೆಂಬುವರ ಅರಿವನ್ನು ಹುಟ್ಟಿಸುವಂತದ್ದಾಗಿದೆ. (ರೋಮಾ 3:20; 7:7).

> ಒಬ್ಬ ಮನುಷ್ಯನು ನೀತಿವಂತನೆಂದು ಹೇಗೆ ನಿರ್ಣಯಿಸಲ್ಪಡುತ್ತಾನೆ ?

ಧರ್ಮಶಾಸ್ತ್ರವನ್ನು ಸಂಪೂರ್ಣವಾಗಿ ಅನುಸರಿಸಿ ನೀತಿವಂತರೆನಿಸಿಕೊಳ್ಳಲು ನಾವು ಅಸಮರ್ಥರಾದುದರಿಂದ, (ಅಂತಹ ಯಾವುದೇ ಪ್ರಯತ್ನದಲ್ಲಿ ನಮ್ಮ ಪಾಪದ ಪ್ರಕೃತಿಯು ಮರಣಕರವಾದ ಬಲಹೀನತೆಯಾಗಿರುತ್ತದೆ) ತನ್ನ ದೃಷ್ಟಿಯಲ್ಲಿ ನೀತಿವಂತರೆಂದು ನಿರ್ಣಯಿಸಲ್ಪಡಲು ದೇವರು ತನ್ನ ಅನುಗ್ರಹದಿಂದ ('ಕೃಪೆ') ಒಂದು ಭಿನ್ನವಾದ ಹಾಗೂ ಅತ್ಯಂತ ಉತ್ಕೃಷ್ಟವಾದ ಮಾರ್ಗವನ್ನು ಯೋಜಿಸಿದ್ದಾನೆ. ಅದೇನೆಂದರೆ — ನಂಬಿಕೆಯ ಮೂಲಕ ರಕ್ಷಣೆಯಲ್ಲಿ. ಆತನು ತನ್ನ ಮಗನಲ್ಲಿ ಮತ್ತು ತನ್ನ ಮಗನ ಮೂಲಕ ಕಲ್ವರಿಯ ಮೇಲೆ ಅರ್ಪಿಸಿದ ಬಲಿಯಲ್ಲಿ ನಮ್ಮ ಪಾಪಗಳಿಗೆ ಒಂದು ರಕ್ಷೆಯನ್ನು ಒದಗಿಸಿದ್ದಾನೆ. (ರೋಮಾ 3:21—26). ದೇವರ ಮುಂದೆ ನೀತಿಯನ್ನು ಹೊಂದಲು ಈ ನೂತನ ಹಾಗೂ ಜೀವಿತದ ಮಾರ್ಗವು ಯೆಹೂದ್ಯರು ಯೆಹೂದ್ಯೇತರರೆಂಬ ಭೇದವಿಲ್ಲದೆ ಎಲ್ಲರಿಗೂ ಉಚಿತವಾಗಿ ದೊರೆಯುವಂತದ್ದಾಗಿದೆ. (ರೋಮಾ 3:29—30; 10:12—13). ಚಾರಿತ್ರಿಕವಾಗಿ ನಂಬಿಕೆಯಿಂದಲೇ ಸಮರ್ಥಿಸಲ್ಪಟ್ಟ (ನೀತಿವಂತನೆಂದು ನಿರ್ಣಯಿಸಲ್ಪಟ್ಟ)ವರೊಬ್ಬರ ಶ್ರೇಷ್ಠ ಉದಾಹರಣೆಯೆಂದರೆ ಅಬ್ರಹಾಮನದಾಗಿರುತ್ತದೆ. ಮುಪ್ಪಿನವನಾಗಿದ್ದು ಮಕ್ಕಳಿಲ್ಲದೇ ಇದ್ದಾಗ್ಯೂ (ಯಾಕಂದರೆ ಆತನ ಹೆಂಡತಿ ಸಾರಳು ಬಂಜೆಯಾಗಿದ್ದಳು), ಆಕಾಶದ ನಕ್ಷತ್ರಗಳಂತೆ ಅಸಂಖ್ಯಾತವಾದ ಒಂದು ಜನಾಂಗಕ್ಕೆ ತಾನು ಮೂಲ ಪಿತೃವಾಗುವನೆಂಬ ದೇವರ ವಾಗ್ದಾನವನ್ನು ಸಂಪೂರ್ಣವಾಗಿ ಅಂಗೀಕರಿಸಿದ್ದನು. (ರೋಮಾ 4:18—21; ಆದಿ 15:4—5). ದೇವರ ಭರವಸೆಯಲ್ಲಿ ಈ ದೃಢ ನಂಬಿಕೆಯು ಅವನ ಲೆಕ್ಕಕ್ಕೆ ನೀತಿಯೆಂದು ಎಣಿಸಲ್ಪಟ್ಟಿತು (ರೋಮಾ 4:22; ಆದಿ 15:6).

ಅಬ್ರಹಾಮನು ಸುನ್ನತಿಯ ಒಡಂಬಡಿಕೆಯನ್ನು ಹೊಂದುವ ಮೊದಲೇ ಈ ಘಟನೆಯು ಆತನ ಜೀವಿತದಲ್ಲಿ ನಡೆದದ್ದರಿಂದ (ಆದಿ 17:7—14), ಸುನ್ನತಿಯುಳ್ಳವರಾದ ಯೆಹೂದ್ಯರಿಗೂ ಮತ್ತು ಸುನ್ನತಿಯಿಲ್ಲದ ಅನ್ಯಜನರಿಗೂ — ಒಟ್ಟಿನಲ್ಲಿ ನಂಬುವವರೆಲ್ಲರಿಗೂ ಅಬ್ರಹಾಮನನ್ನು (ಆತ್ಮೀಯ) ತಂದೆಯನ್ನಾಗಿ ಮಾಡಲಾಯಿತೆಂದು ಪೌಲನು ತಿಳಿಸುತ್ತಾನೆ (ರೋಮಾ 4:9—17). ಈ ನಂಬಿಕೆಯೆಂಬ ನೀತಿಯು, ಕರ್ತನಾದ ಯೇಸುಕ್ರಿಸ್ತನ ಬಲ ಹಾಗೂ ಸತ್ತವರೊಳಗಿಂದ ಆತನನ್ನು ಎಬ್ಬಿಸಿರುವುದನ್ನು ನಂಬಿದರೆ ನಮಗೂ ಕೂಡ ದೊರೆಯುತ್ತದೆಂದು ಪೌಲನು ಮುಂದುವರೆಯುತ್ತಾ ತಿಳಿಸುತ್ತಾನೆ. (ರೋಮಾ 4:23—25). ನಾವು ದೇವರಿಗೆ ವಿರೋಧಿಗಳಾಗಿರುವಾಗಲೂ ಆತನು ತನ್ನ ಮಗನನ್ನು ನಮಗಾಗಿ ಸಾಯಲು ಕೊಟ್ಟದ್ದರಲ್ಲಿ ದೇವರು ತನ್ನ ಪ್ರೀತಿಯನ್ನು ಬಹು ನಿರ್ಧರಿತ ರೀತಿಯಲ್ಲಿ ನಮಗೆ ತೋರಿಸಿಕೊಟ್ಟಿದ್ದಾನೆ (ರೋಮಾ 5:10). ಯೇಸು ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ ವಿಶ್ವಾಸಿಗಳನ್ನು ಕುರಿತು ಪೌಲನು ಬರೆಯುತ್ತಾ — ಹೀಗಿರಲಾಗಿ ನಾವು ನಂಬಿಕೆಯಿಂದನೀತಿವಂತರಾದ ಕಾರಣ, ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ದೇವರೊಂದಿಗೆ ಉಂಟಾದ ಸಮಾಧಾನದಲ್ಲಿ ಇರೋಣ. ನಾವು ಈಗ ನೆಲೆಗೊಂಡಿರುವ ದೇವರ ಕೃಪಾಶ್ರಯದಲ್ಲಿ ಆತನ ಮುಖಾಂತರವೇ ನಂಬಿಕೆಯಿಂದ ಪ್ರವೇಶವಾಯಿತು ಮತ್ತು ದೇವರ ಮಹಿಮೆಯನ್ನು ಹೊಂದುವೆವೆಂಬ ಭರವಸದಿಂದ ಉಲ್ಲಾಸವಾಗಿದ್ದೇವೆ (ರೋಮಾ 5:1—2; 5:11; 8:18—25).

**ಆದಾಮನ ಪಾಪದ ಪರಿಣಾಮ ಮತ್ತು ಯೇಸು ಕ್ರಿಸ್ತನ ವಿಧೇಯತೆ.**

ದೇವರ ವಾಗ್ದಾನಗಳಲ್ಲಿ ನಂಬಿಕೆಯಿಡುವವರ ಬಗ್ಗೆ ಆತನ ಅನುಗ್ರಹವು ಹೇಗಿರುತ್ತದೆಂಬುದನ್ನು ದೇವರ ಇಬ್ಬರು ಪುತ್ರರ ಕ್ರಿಯೆಗಳಿಂದಾದ ಪರಿಣಾಮಗಳಲ್ಲಿ ಚಿತ್ರೀಕರಿಸಿದೆ. (ರೋಮಾ 5:15–19). ಮೊದಲನೇ ಪುರುಷನಾದ ಆದಾಮನಿಂದ ಪಾಪ ಮತ್ತು ಮರಣವು ಲೋಕದೊಳಗೆ ಪ್ರವೇಶಿಸಿದವು. ಅವನಿಂದಲೇ ಎಲ್ಲಾ ಮಾನವರೂ ಬಂದಿರುತ್ತಾ (ವಿಕಾಸವಾದಕ್ಕೆ — ಡಾರ್ವಿನ್ನನ ವಾದಕ್ಕೆ ಇಲ್ಲಿ ಎಡೆಯಿಲ್ಲ)ರಾದ್ದರಿಂದ, ಆ ಒಬ್ಬ ಮನುಷ್ಯನ ಅವಿಧೇಯತ್ವವು ಎಲ್ಲಾ ಮಾನವ ಜನಾಂಗದ ಮೇಲೆ ದಂಡನೆ ಹಾಗೂ ಮರಣದ ಶಿಕ್ಷೆಯನ್ನು ಬರಮಾಡಿತು (ರೋಮಾ 5:12–14). ದೇವರು ತನ್ನ ಕೃಪೆಯಲ್ಲಿ ನೂತನ ಸೃಷ್ಟಿಯಲ್ಲಿ ಪ್ರಥಮ ಫಲದಂತೆ ತನ್ನ ಮಗನಾದ ಯೇಸುಕ್ರಿಸ್ತನನ್ನು ಕೊಟ್ಟನು. ತನ್ನ ತಂದೆಗೆ ಯೇಸು ಕ್ರಿಸ್ತನ ಸಂಪೂರ್ಣ ವಿಧೇಯತೆಯಿಂದಾಗಿ, ಆತನು 'ಎರಡನೆಯ ಆದಾಮ' ನಾದನು. ನಂಬಿಕೆ ಮತ್ತು ವಿಧೇಯತೆಯನ್ನು ತೋರಿಸುವವರೆಲ್ಲರಿಗೆ ಆತನು (ಆತ್ಮೀಕ) ಮೂಲಪಿತೃವಾದನು. ಆದರಿಂದಾಗಿ 'ಸಮರ್ಥಿಸಲ್ಪಟ್ಟನು'(ಅಂದರೆ ನೀತಿವಂತನೆಂದು ಎಣಿಸಲ್ಪಟ್ಟನು) ಮತ್ತು ನಿತ್ಯಜೀವದ ವಾಗ್ದಾನ ಹೊಂದಿದನು — ಇದು ಪ್ರಥಮ ಆದಾಮನಿಂದ ವಂಶ ಪಾರಂಪರ್ಯವಾಗಿ ಹೊಂದಿದ ದಂಡನೆ ಹಾಗೂ ಮರಣದ ಶಿಕ್ಷೆಯ ತದ್ವಿರುದ್ಧವಾಗಿದೆ (ರೋಮಾ 5:21).

**ದೀಕ್ಷಾಸ್ನಾನದಲ್ಲಿ ನಂಬಿಕೆಯ ವಿಧೇಯತೆಯು ನಮ್ಮನ್ನು ಕ್ರಿಸ್ತನಲ್ಲಿ ಐಕ್ಯಗೊಳಿಸುತ್ತದೆ.**

ಪೌಲನು ಹೇಳುತ್ತಾನೆ — ನಾವು ದೇವರ ಕೃಪೆಗೆ ಪಾತ್ರರಾಗಬೇಕಾದಲ್ಲಿ, ಯೇಸುಕ್ರಿಸ್ತನೊಂದಿಗೆ ಸೇರಬೇಕು. ಕೇವಲ ಆತನ ಬಲಿ ಮತ್ತು ಪುನರುತ್ಥಾನಗಳ ಸಂಗತಿಗಳನ್ನು ಮಾನ್ಯತೆ ಮಾಡುವುದರಿಂದಲ್ಲ, ಆತನ ಮರಣದಲ್ಲಿ ದೀಕ್ಷಾಸ್ನಾನ ಹೊಂದಿ, ಅವುಗಳಲ್ಲಿ ಭಾಗಿಗಳಾಗುವುದರಿಂದ ಮಾತ್ರ ಸಾಧ್ಯ. 'ದೀಕ್ಷಾಸ್ನಾನವು ವಿಧೇಯತೆಯ ಒಂದು ಕಾರ್ಯವಾಗಿದೆ. ನಾವು ಸಾಂಕೇತಿಕವಾಗಿ ನೀರಿನಲ್ಲಿ ಮುಳುಗಿದಾಗ, ಪಾಪಕ್ಕೆ ದಾಸರಾಗಿದ್ದ ನಮ್ಮ ಹಿಂದಿನ ಜೀವಿತದ ಮಾರ್ಗವನ್ನು ನಾವು ತ್ಯಜಿಸುತ್ತೇವೆ. ಮತ್ತು ಕ್ರಿಸ್ತನಲ್ಲಿ ನೂತನ ಜೀವಿತಕ್ಕೆ ''ಆತ್ಮೀಕ ಪುನರುತ್ಥಾನ''ಕ್ಕೆ ಸೇರಿದವರಾಗಿ, ''ನೀತಿಗೆ ದಾಸರಾಗುತ್ತೇವೆ'' (ರೋಮಾ 6:1–7, 15–18). ದೀಕ್ಷಾಸ್ನಾನದಲ್ಲಿ ಕ್ರಿಸ್ತನೊಂದಿಗೆ ಸೇರುವ ಈ ಅಗತ್ಯ ಕಾರ್ಯಕ್ಕೆ ಬದಲಾದ ಸ್ವೀಕಾರಾರ್ಹವಾದ ಯಾವುದೂ ಇಲ್ಲವೆಂಬುದು ಸ್ಪಷ್ಟವಾಗಿದೆ. ಮತ್ತೊಂದು ಕಡೆ 'ಪಾಪವನ್ನು ತೊಳೆಯುವಂತಾದುದು'' ಎಂದು ವಿವರಿಸಿದೆ (ಅ.ಕೃ. 22:16). ಇದನ್ನೂ ಮತ್ತು ಕ್ರಿಸ್ತನ ಇತರ ಎಲ್ಲಾ ಆಜ್ಞೆಗಳನ್ನೂ ಕೈಕೊಳ್ಳುವುದರಿಂದ, ನಾವು ಆತನನ್ನು ನಿಜವಾಗಿಯೂ ಪ್ರೀತಿಸುತ್ತೇವೆಂದು ತೋರಿಸುತ್ತೇವೆ. (ಯೋಹಾನ 14:21). ಅಲ್ಲದೆ ನಮ್ಮ ಕ್ರಿಯೆಗಳಿಂದ ನಮ್ಮ ನಂಬಿಕೆಯ ಯಥಾರ್ಥತೆಯನ್ನು ಸಮರ್ಥಿಸಬಹುದು (ಯಾಕೋಬ 2:20–24).

(ಈ ವಚನಗಳನ್ನೂ ಓದಿ — ಅ.ಕೃ. 2:37, 38, 41; 8:4, 5, 12, 36, 38; 9:17–18, 22:16; 10:45–48; 16:14–15, 30–33; 18:8)

**ನಮ್ಮೊಳಗಿನ ಹೋರಾಟ — ದೇವರ ನಿಯಮಗಳು ಮತ್ತು ನಮ್ಮ ಶರೀರದ ಅಂಗಗಳ ಪಾಪ.**

ಕ್ರಿಸ್ತನೊಂದಿಗೆ ಈ ಐಕ್ಯತೆಯು ದೈವೀಕವಾಗಿ ಒಂದು ಆತ್ಮೀಕ ವಿವಾಹವೆಂದು ಪರಿಗಣಿಸಲ್ಪಟ್ಟಿದೆ. ಆದರಲ್ಲಿ ಹಿಂದಿನ ಧರ್ಮಶಾಸ್ತ್ರದ ಕಟ್ಟುಪಾಡಿಗೆ ನಾವು ಸತ್ತವರಾಗಿ ಹೊಸ ಪತಿಯಾದ ಯೇಸುಕ್ರಿಸ್ತನೊಂದಿಗೆ ಐಕ್ಯವಾಗಿದ್ದೇವೆ (ರೋಮಾ 7:1–6). ಹಾಗಾದರೆ ನಾವು ಪಾಪದ ಪ್ರಭಾವದಲ್ಲಿ ಇನ್ನು ಮುಂದೆ ಇರಲಾರವೆಂದು ಅಭಿಪ್ರಾಯವೋ? ಹಾಗಲ್ಲ, ಎಂದು ಪೌಲನು ತನ್ನ ಅಂತರಂಗದ ಪ್ರೇರಣೆಗಳ ಒಂದು ಸ್ವಂತ ವಿಶ್ಲೇಷಣೆಯಲ್ಲಿ ಕಣ್ಣಿಗೆ ಕಟ್ಟುವಂತೆ ಬಣ್ಣಿಸಿರುತ್ತಾನೆ (ರೋಮಾ 7:7–20). ಆತನು ಗ್ರಹಿಸಿರುವುದೇನೆಂದರೆ, ತಾನು ಒಳ್ಳೇದೆಂದು ತಿಳಿದು ಅದನ್ನು ಮಾಡಬೇಕೆಂದಿದ್ದರೂ ಮಾಡಲಾಗದೇ ಇದ್ದೇನೆ. ಆದರೆ ಕೆಟ್ಟದ್ದನ್ನು ಹಗೆ ಮಾಡಿದರೂ ಅದನ್ನೇ ಮಾಡುತ್ತಾ ಮುಂದುವರೆಯುತ್ತೇನೆ (ರೋಮಾ 7:15). ಎರಡು ವಿರುದ್ಧ ಹಾಗೂ ಹೋರಾಡುವ ನೀತಿಗಳನ್ನು ಆತನು ತನ್ನಲ್ಲಿ ಕಂಡುಕೊಳ್ಳುತ್ತಾನೆ :

> ''ಅಂತರಾತ್ಮದೊಳಗೆ ದೇವರ ನಿಯಮದಲ್ಲಿ ಆನಂದಪಡುವವನಾಗಿದ್ದೇನೆ. ಆದರೆ ನನ್ನ ಅಂಗಗಳಲ್ಲಿ ಬೇರೊಂದು ನಿಯಮವು ಉಂಟೆಂದು ನೋಡುತ್ತೇನೆ. ಅದು ನನ್ನ ಮನಸ್ಸಿನಲ್ಲಿರುವ ನಿಯಮಕ್ಕೆ ವಿರುದ್ಧವಾಗಿ ಕಾದಾಡಿ ನನ್ನನ್ನು ಸೆರೆ ಹಿಡಿದು ನನ್ನ ಅಂಗಗಳಲ್ಲಿರುವ ಪಾಪದ ನಿಯಮಕ್ಕೆ ವಶ ಮಾಡುವಂತದಾಗಿದೆ.
> — (ರೋಮಾ 7:22–23)

ಈ ಅಂತರಂಗದ ಈ ಪಾಪಮಾಡುವ ಪ್ರವೃತ್ತಿಯನ್ನು — ಅಂದರೆ ನಮ್ಮನ್ನು ಮೋಸಗೊಳಿಸಿ ಕೊಲ್ಲುವ ನಮ್ಮೊಳಗಿನ ನಿಜವಾದ ಪಿಶಾಚನನ್ನು ನಿರೋಧಿಸಲು ಹೋರಾಡಿದವರೆಲ್ಲರೂ — ಪೌಲನ ಬೇಗುದಿಯ ಸೂಚನೆಯನ್ನು ಪ್ರತಿನಿಧಿಸುವವರಾಗಿರುತ್ತಾರೆ:

ಸಂಪುಟ 1 ಸಂಚಿಕೆ 8 / 1982

ಪ್ರಕಾಶಕರು :—
ದಿ ಕ್ರಿಸ್ಟಡೆಲ್ಫಿಯನ್ಸ್,
23/4, ಬೆನ್ಸನ್ ರಸ್ತೆ, ಬೆಂಗಳೂರು 560 046.

"ಅಯ್ಯೋ, ನಾನು ಎಂಥ ದುರವಸ್ಥೆಯಲ್ಲಿ ಬಿದ್ದ ಮನುಷ್ಯನು ಇಂಥ ಮರಣಕ್ಕೆ ಒಳಗಾದ ಈ ದೇಹದಿಂದ ನನ್ನನ್ನು ಬಿಡಿಸುವವರು ಯಾರು? ಬಿಡಿಸುವವನು ಇದ್ದಾನೆಂಬುದಕ್ಕಾಗಿ ನಮ್ಮ ಕರ್ತನಾದ ಯೇಸುಕ್ರಿಸ್ತನ ಮೂಲಕ ದೇವರಿಗೆ ಸ್ತೋತ್ರ. (ರೋಮಾ 7:24-25)

**ದೇವರಾತ್ಮದಿಂದ ಒಯ್ಯಲ್ಪಡುವದು.**

ಅಪೋಸ್ತಲನು ಬಲವಾದ ವಾಗ್ವಾದದಿಂದ ಈ ಭಾಗವನ್ನು ಪೂರೈಸುತ್ತಾ ಹೀಗೆ ಹೇಳುತ್ತಾನೆ — ಒಮ್ಮೆ ಕ್ರಿಸ್ತನಲ್ಲಿ ದೀಕ್ಷಾಸ್ನಾನ ಹೊಂದಿದ ಮೇಲೆ ಮತ್ತು ರಕ್ಷಣೆಗೆ ಸಂಬಂಧಿಸಿದವರಾಗಿ, ನಾವು "ಆತ್ಮನಿಗೆ ತಕ್ಕಂತೆ ಬದುಕಬೇಕು" ಯಾಕಂದರೆ, "ಪವಿತ್ರಾತ್ಮನವುಗಳ ಮೇಲೆ ಮನಸ್ಸಿಡುವುದು ಜೀವವೂ ಮನಶ್ಶಾಂತಿಯೂ ಆಗಿದೆ". ಯಾರು ತಮ್ಮನ್ನು ತಮ್ಮ ಪಾಪದ ಶರೀರಾಧೀನ ಸ್ವಭಾವದಿಂದ ನಡೆಸಲ್ಪಡುತ್ತಾರೋ ಅವರು ದೇವರನ್ನು ಮೆಚ್ಚಿಸಲು ಸಾಧ್ಯವಿಲ್ಲ" (ರೋಮಾ 8:1-8). ನಮ್ಮ ಜೀವಿತಗಳನ್ನು ನಡೆಸುವ ಈ ಶಕ್ತಿಯನ್ನೇ "ದೇವರಾತ್ಮ", "ಕ್ರಿಸ್ತನ ಆತ್ಮ" ಮತ್ತು ಸಾಮಾನ್ಯವಾಗಿ "ಕ್ರಿಸ್ತನು ನಿಮ್ಮಲ್ಲಿರುವುದು" ಎಂದು ಕರೆಯಲ್ಪಟ್ಟಿದೆ. ಅದು ಪುತ್ರತ್ವದ ಹಾಗೂ ವಿಧೇಯತ್ವದ ಒಂದು ಭಾವನೆಯಾಗಿರುವುದಲ್ಲದೆ, ಅದರಿಂದಾಗಿ ದೇವರನ್ನು "ಅಬ್ಬಾ" ಎಂದು (ಪ್ರಿಯ ತಂದೆ ಎಂಬುದಕ್ಕೆ ಯೆಹೂದ್ಯರ ಪದ) ಕರೆಯಲು ನಮಗೆ ಧೈರ್ಯ ಕೊಡುತ್ತದೆ (ರೋಮಾ 8:14-16; ಗಲಾತ್ಯ 4:6-7). ಈ ಮಾರು ... ಲೋಕಿಕಪದಗಳ ಸಮೀಪ ಒಡನಾಟವು 'ದೇವರ ವಾಕ್ಯವಾದ ಸತ್ಯವೇದದ' ಪ್ರಭಾವದಿಂದ ನಮ್ಮೊಳಗೆ ಉಂಟಾದ 'ಕ್ರಿಸ್ತನ ಮನಸ್ಸಿ' ನಿಂದ ಕೈವಸ್ತಾದ ನಮ್ಮ ಪ್ರೇರಣೆಗಳು ಹೊರಹೊಮ್ಮ ಬೇಕೆಂದು ತಿಳಿಸುತ್ತದೆ (ಗಲಾತ್ಯ 5:19; ಕೊಲೊಸ್ಸೆ 3:16). ಯೇಸುಕ್ರಿಸ್ತನು ಪರಿಪೂರ್ಣತೆಯಿಂದ ತೋರಿಸಿದ ಪರಲೋಕದ ದೈವತ್ವದ ಮಾದರಿಯನ್ನು ನಾವು ಹೇಗೆ ಅನುಕರಿಸಬೇಕೆಂಬ ದೈವಪ್ರೇರಿತವಾದ ಹಾಗು ನಂಬಲರ್ಹವಾದ ಶಿಕ್ಷಣದ ಮೂಲ ಇಂದು ಅದೊಂದೇ ಆಗಿದೆ. ನಂತರ 'ಮನಸ್ಸು' ಹಾಗು 'ಆತ್ಮ' ( Spirit ) ಗಳ ಸಮಾನತೆಯನ್ನು ಸರಳವಾಗಿ ಇಲ್ಲಿ ತೋರಿಸಿದೆ (1 ಕೊರಿಂಥ 2:10-16 ನ್ನು ಯೆಶಾಯ 40:12 ರೊಂದಿಗೆ ಹೋಲಿಸಿ). ಈ ವಾಸ್ತವಿಕ ಸಂಗತಿಯನ್ನು ಅಂಗೀಕರಿಸುವದರಿಂದ ದೇವರು ಮತ್ತು ಕ್ರಿಸ್ತನ ಜೊತೆಗೆ ಮತ್ತೊಬ್ಬ ಮೂರನೆಯ ವ್ಯಕ್ತಿ ಇರುತ್ತಾನೆಂಬ ತಪ್ಪಾದ ಗ್ರಹಿಕೆಯಿಂದ ನಮ್ಮನ್ನು ರಕ್ಷಿಸುತ್ತದೆ. ಇದು ಹಾಗಲ್ಲ — ಒಬ್ಬ ವ್ಯಕ್ತಿಯು ದೇವರಾತ್ಮದಿಂದ ನಡೆಸಲ್ಪಟ್ಟಾಗ, ಯೇಸುಕ್ರಿಸ್ತನಿಂದ ಬೋಧಿಸಲ್ಪಟ್ಟಂತೆ, ದೇವರ ಮನಸ್ಸಿನಿಂದ ನಡೆಸಲ್ಪಡುತ್ತಾನೆ. ತರುವಾಯ 8ನೇ ಅಧ್ಯಾಯದಲ್ಲಿ, ಮಧ್ಯೆ ಪ್ರವೇಶಿಸುವ ಆತ್ಮನು (ವ.26-27) ಯೇಸುಕ್ರಿಸ್ತನೆಂದು ಗುರುತಿಸಲಾಗಿದೆ (ವ.34). ಯಾಕಂದರೆ ದೇವರಿಗೂ ಮನುಷ್ಯರಿಗೂ ಮಧ್ಯಸ್ಥನು ಒಬ್ಬನೇ. ಆತನು ಮನುಷ್ಯನಾಗಿರುವ ಕ್ರಿಸ್ತಯೇಸುವೇ (1 ತಿಮೊಥೆ 2:5). ಅಂಥಹ ಒಬ್ಬ ಮಧ್ಯಸ್ಥಗಾರನೊಂದಿಗೆ ಹಾಗೂ ದೇವರು ತಾನೇ ಅಂತಿಮವಾಗಿ ನಮ್ಮ ಎಲ್ಲಾ ವಿಷಯಗಳಿಗೆ ಕಾರ್ಯ ನಡೆಸುತ್ತಿರುವಾಗ, ನಮಗೆ ವಿರೋಧವಾಗಿರುವವರು ಯಾರು? (ನಮ್ಮದೇ ಆದ ವಿರೋಧಿಸುವ ಆತ್ಮ (Spirit .)ಗಳೇ ಹೊರತು ಮತ್ತ್ಯಾವುದಿದೆ?). ನಮ್ಮನ್ನು ಪ್ರೀತಿಸಿದವನ ಮೂಲಕ ನಾವು ಜಯಗಳಿಸಿದವರಿಗಿಂತಲೂ ಹೆಚ್ಚಿನವರಾಗಿದ್ದೇವೆ. (ರೋಮಾ 8:31-39).

**ನಾನು ರಕ್ಷಣೆ ಹೊಂದಲು ಏನು ಮಾಡಬೇಕು ?**

ಈ ಪ್ರಶ್ನೆಗೆ ಹೊರಡಲು ಮತ್ತೊಂದು ಪ್ರಶ್ನೆಯನ್ನು ನಾವೇ ಹಾಕಿ ಕೊಳ್ಳಬೇಕು? ಕರ್ತನ ಬರುವಿಕೆಯಲ್ಲಿ ಪ್ರಕಟಪಡಿಸುವ ಮಹಾ ರಕ್ಷಣೆಯಲ್ಲಿ ಪಾಲ್ಗೊಳ್ಳಲು ನಾವು ಪೂರೈಸಬೇಕಾದ ಷರತ್ತುಗಳೇನು? ಅಂತಹ ವರವನ್ನು ಕೊಡುವುದು ಅನುಗ್ರಹಿಸುವವನ ಏರ್ಪಾಟಿಗೆ ಸೇರಿದ್ದೆಂದು ಮನವರಿಕೆಯನ್ನು ಸೂಚಿಸುತ್ತದೆ. ಯಾವ ಷರತ್ತುಗಳ ಮೇಲೆ ಅದನ್ನು ನೀಡಬಹುದೆಂಬುದು ಆ ಆಶೀರ್ವಾದವನ್ನು ಕೊಡುವವನ ಹಕ್ಕಾಗಿರುತ್ತದೆ. ಇದನ್ನು ಸರಿಯಾದ ರೀತಿಯಲ್ಲಿ ಹೇಳುವುದಾದರೆ, ಇದನ್ನು ಪಡೆಯುವಾತನು ಶಿಶುಭಾವದ ಮನಸ್ಸನ್ನು ಹೊಂದಿರಬೇಕೆಂದು ಯೇಸುಕ್ರಿಸ್ತನು ಹೇಳಿದ್ದನ್ನು ಪುನರುಚ್ಚರಿಸಬೇಕಾಗಿದೆ (ಲೂಕ 18:17). ಮಾನವೀಯತೆಯಿಂದ ನಡೆಯುವುದಷ್ಟೇ ನಮ್ಮನ್ನು ರಕ್ಷಿಸಲಾರದು. ನಮ್ಮನ್ನು ರಕ್ಷಿಸುವುದು ಯಾವುದೆಂದು ತಿಳಿಯಲು ನಾವು ಅಪೋಸ್ತಲರ ಬೋಧನೆಗಳನ್ನು ಕೇಳಬೇಕು. ರಕ್ಷಣೆಯ ಒಂದು ಮಾರ್ಗವನ್ನು ತೆರೆಯಲೋಸುಗವೇ ಯೇಸುಕ್ರಿಸ್ತನು ಹುಟ್ಟಿದನು. ಆ ಮಾರ್ಗವನ್ನು ತೆರೆದ ಮೇಲೆ ಆತನು, ಮಾನವ ಜನಾಂಗವು ಯಾವ ರೀತಿಯಲ್ಲಿ ಪ್ರವೇಶಿಸಬಹುದೆಂದು ತಿಳಿಸಲು ತನ್ನ ಅಪೋಸ್ತಲರನ್ನು ಕಳುಹಿಸಿದನು. "ನೀವು ಲೋಕದ ಎಲ್ಲಾ ಕಡೆಗೆ ಹೋಗಿ ಜಗತ್ತಿಗೆಲ್ಲಾ ಸುವಾರ್ತೆಯನ್ನು ಸಾರಿರಿ. ನಂಬಿ ದೀಕ್ಷಾಸ್ನಾನ ಮಾಡಿಸಿ ಕೊಳ್ಳುವವನು ರಕ್ಷಣೆ ಹೊಂದುವನು. ನಂಬದೆ ಹೋಗುವವನು ದಂಡನೆಗೆ ಗುರಿಯಾಗುವನು (ಮಾರ್ಕ 16:15-16).

ತನ್ನ ಹೆಸರಿಗೆ ಒಂದು ಪ್ರಜೆಯನ್ನು ಆರಿಸಿ ಕೊಳ್ಳುವುದರ ನೀತಿಯ ಒಂದು ಸ್ಪಷ್ಟ ಸೂಚನೆ ಇಲ್ಲಿದೆ (ಅ.ಕೃ. 15:14). ಸುವಾರ್ತೆಯು ಸಾರಲ್ಪಡಬೇಕು. ಅದನ್ನು ಯಾರಿಗೆ ಸಾರಲ್ಪಡುತ್ತದೋ ಅವರು ಅದನ್ನು ನಂಬಬೇಕು. ಅನುಸರಣೆಯಿಲ್ಲದೆ ರಕ್ಷಣೆ ಇಲ್ಲ. ಯಾಕಂದರೆ ಯಾರು ದೇವರ ರಾಜ್ಯವನ್ನು ಚಿಕ್ಕ ಮಗುವಿನಂತೆ ಅಂಗೀಕರಿಸುವದಿಲ್ಲವೋ ಅಂಥವರು ಅದರೊಳಗೆ ಎಂದಿಗೂ ಪ್ರವೇಶಿಸುವಂತಿಲ್ಲ. ಹೀಗೆ ಸುವಾರ್ತೆಯು ರಕ್ಷಣೆಗೆ ಒಂದು ನಿಯೋಗಿ (ಮಧ್ಯವರ್ತಿ)ಯಾಗಿದೆ. ಆದ್ದರಿಂದಲೇ ಪೌಲನು, "ನಿಮ್ಮ ರಕ್ಷಣೆಯ ಸುವಾರ್ತೆ" ಎಂದು ಕರೆಯುತ್ತಾನೆ.(ಎಫೆಸ 1:13). ಆತನು ಮತ್ತೆ "ಸುವಾರ್ತೆಯು ದೇವರ ಬಲಸ್ವರೂಪವಾಗಿದ್ದು ನಂಬುವವರೆಲ್ಲರಿಗೆ ರಕ್ಷಣೆಯನ್ನುಂಟುಮಾಡುತ್ತದೆ (ರೋಮಾ 1:16). ಆದ್ದರಿಂದ

ಯಾರಾದರೂ ರಕ್ಷಿಸಲ್ಪಡಬೇಕಾದಲ್ಲಿ, ಆತನು ಮಾಡಬೇಕಾದ ಪ್ರಥಮ ಕಾರ್ಯವೇನೆಂದರೆ — ಸುವಾರ್ತೆಯನ್ನು ನಂಬುವುದು. ಸುವಾರ್ತೆಯನ್ನು ನಂಬಬೇಕಾದರೆ ಸುವಾರ್ತೆಯನ್ನು ತಿಳಿಯಬೇಕು. ಇದನ್ನೇ ಪೌಲನು ಹೇಳುವುದು — ''ತಾವು ಯಾವನನ್ನು ನಂಬಲಿಲ್ಲವೋ ಆತನ ನಾಮವನ್ನು ಹೇಳಿಕೊಳ್ಳುವುದು ಹೇಗೆ?'' (ರೋಮಾ 10:14). ನಂಬಿಕೆಗೆ ಮೊದಲು ತಿಳುವಳಿಕೆ ಇರಬೇಕು. ಯಾಕಂದರೆ ಒಬ್ಬನು ತನಗೆ ಮೊದಲು ತಿಳಿಸದಿದ್ದ ಸಂಗತಿಗಳನ್ನು ನಂಬಲು ಸಾಧ್ಯವಿಲ್ಲ. ಆದ್ದರಿಂದ ರಕ್ಷಿಸಲ್ಪಡಬೇಕೆಂಬ ಉತ್ಸುಕತೆಯುಳ್ಳ ಒಬ್ಬ ವ್ಯಕ್ತಿಯು ಸುವಾರ್ತೆ ಎಂದರೇನೆಂಬುದನ್ನು ಮೊದಲು ವಿಚಾರಿಸಬೇಕು. ಅದನ್ನು ತಿಳಿಯದ ಹೊರತು ಅದನ್ನು ನಂಬುವ ಎರಡನೇ ಹಂತಕ್ಕೆ ಹೋಗಲಾಗದು. ಸುವಾರ್ತೆಯನ್ನು ''ಒಂದೇ ವಿಶ್ವಾಸ'' ವೆಂದು ಕರೆಯಲ್ಪಟ್ಟಿದೆ. ಯಾಕಂದರೆ ಅದು ಅನೇಕ ವಿಷಯಗಳಿಂದ ಮಾಡಲ್ಪಟ್ಟು ಅವುಗಳನ್ನು ಸ್ವೀಕರಿಸಲು ವಿಶ್ವಾಸ ಬೇಕಾಗಿದೆ. ಅದನ್ನು ಒಂದು ತತ್ವವನ್ನಾಗಿ ನಿರ್ಣಯಿಸಲ್ಪಟ್ಟಿದೆ — ನಂಬಿಕೆಯಿಲ್ಲದೆ ದೇವರನ್ನು ಮೆಚ್ಚಿಸುವುದು ಅಸಾಧ್ಯ (ಇಬ್ರಿಯ 11:6).

## ಸುವಾರ್ತೆಯೆಂದರೇನು?

ಆದ್ದರಿಂದ ಈ ಸುವಾರ್ತೆಯೆಂದರೇನು? ಲೂಕನು ಅಪೊಸ್ತಲರ ಕೃತ್ಯಗಳ ಪುಸ್ತಕ 8:12 ರಲ್ಲಿ ಫಿಲಿಪ್ಪನು ಸಮಾರ್ಯದವರಿಗೆ ಸಾರುವದನ್ನು ವಿವರಿಸುತ್ತಾ, ಅದು (ಸುವಾರ್ತೆಯು) ದೇವರ ರಾಜ್ಯದ ಹಾಗೂ ಯೇಸುಕ್ರಿಸ್ತನ ಹೆಸರಿನ ವಿಷಯವಾಗಿದೆ ಎಂದು ಹೇಳುತ್ತಾನೆ. ಇದರಿಂದ ಇದು ಎರಡು ಮೂಲ ವಿಷಯಗಳ ಒಂದು ಸಂಯುಕ್ತವಾಗಿದೆ — ಒಂದು ದೇವರ ರಾಜ್ಯಕ್ಕೆ ಸಂಬಂಧಿಸಿದುದು; ಮತ್ತೊಂದು ನಮ್ಮ ವೈಯುಕ್ತಿಕ ರಕ್ಷಣೆಗೆ ಪರಿಣಾಮ ಬೀರುವ ಯೇಸುವಿನ ''ಹೆಸರಿನ'' ಫಲದ ಸಿದ್ಧಾಂತವಾಗಿದೆ. ರಕ್ಷಿಸುವ ನಂಬಿಕೆಗೆ ಮೊದಲು ಇವೆರಡನ್ನೂ ಚೆನ್ನಾಗಿ ಅರಿತಿರಬೇಕು.

ಆ ''ಹೆಸರಿನ'' ವಿಷಯದ ಬಗ್ಗೆ ಅ. ಕೃ. 4:12ರಲ್ಲಿ ನಮಗೆ ತಿಳಿಸಲ್ಪಟ್ಟಿದೆ — ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ರಕ್ಷಣೆಯಾಗುವುದಿಲ್ಲ. ಅಂದರೆ — ಒಂದೇ ಒಂದು ಹೆಸರು ಕೊಡಲ್ಪಟ್ಟಿದೆ. ಅದಾವುದೆಂದರೆ — ಯೇಸುಕ್ರಿಸ್ತನ ಹೆಸರೇ. ಈ ಹೆಸರನ್ನು ಹೇಗೆ ''ಕೊಡಲ್ಪಟ್ಟಿದೆ'' ಎಂಬುದನ್ನು ಮತ್ತಾಯ, ಮಾರ್ಕ, ಲೂಕ ಮತ್ತು ಯೋಹಾನರು ಬರೆದಿರುವ ಘಟನೆಗಳಲ್ಲಿ ಚಿತ್ರೀಕರಿಸಿದೆ. ದೇವರಾತ್ಮನಿಂದ ಹುಟ್ಟಿದವನಾಗಿ, ಯೇಸುವು ನಮಗೆ ಜ್ಞಾನವೂ, ನೀತಿಯೂ ಶುದ್ಧೀಕರಣ ವಿಮೋಚನೆಗೆ ಕಾರಣನೂ ಆದನು (1 ಕೊರಿ 1:30). ಆತನು ಮಾನವನಾಗಿದ್ದರೂ ಸಹ ಈ ಮಾನವ ಪ್ರಕೃತಿಯಲ್ಲಿ ತಂದೆಯು ಮೆಚ್ಚಿದಂತ ಗುಣಗಳನ್ನು ಪ್ರಕಟಪಡಿಸಿದನು. ಆತನ ಶಿಲುಬೆಯಲ್ಲಿ, ರಕ್ತಮಾಂಸವು ಬಲಿಯಾಗಿ ಅರ್ಪಿಸಲ್ಪಟ್ಟಿತು. ಮತ್ತು ಆದಾಮನ ಪ್ರಕೃತಿಯಲ್ಲಿ ದೇವರ ನಡವಳಿಕೆಯು ಆತನ ನೀತಿಯಾಗಿ ಘೋಷಿಸಲ್ಪಟ್ಟಿತು. ಪುನರುತ್ಥಾನದಲ್ಲಿ ವಧಿಸಲ್ಪಟ್ಟ ಬಲಿಯು ಸ್ವೀಕರಿಸಲ್ಪಟ್ಟಿತು. ಮತ್ತು ಯೇಸುಕ್ರಿಸ್ತನು ಇನ್ನೆಂದಿಗೂ ಸಾಯದಂತೆ ಬದುಕುತ್ತಾನೆ — ಮಾನವರು ತಮ್ಮ ಮೇಲೆ ತೆಗೆದು ಕೊಂಡು ದೇವರ ಮುಂದೆ ನಿಲ್ಲುವಂತವರಾಗಿ, ಆತನಿಂದ ಸ್ವೀಕರಿಸಲ್ಪಡುವಂತಾ ಹೆಸರು.

ವಿಶ್ವಾಸಿಗಳು ಈ ಹೆಸರನ್ನು ತಮ್ಮ ಮೇಲೆ ತೆಗೆದುಕೊಳ್ಳುವ ರೀತಿಯು ದೀಕ್ಷಾಸ್ನಾನದ ವಿಧಿಯಲ್ಲಿದೆ. ದೈವೀಕ ನಿಯೋಜಿತ ಕ್ರಮದಂತೆ ಅದು ''ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರಿನಲ್ಲಿ'' ಎಂದು ತಿಳಿಸಲ್ಪಟ್ಟಿದೆ. ಅಪೊಸ್ತಲನು ಹೇಳುತ್ತಾನೆ, ''ಕ್ರಿಸ್ತನಲ್ಲಿ ಸೇರುವದಕ್ಕೆ ದೀಕ್ಷಾಸ್ನಾನ ಮಾಡಿಸಿಕೊಂಡ ನೀವೆಲ್ಲರೂ ಕ್ರಿಸ್ತನನ್ನು ಧರಿಸಿಕೊಂಡಿರಿ'' (ಗಲಾತ್ಯ 3:27). ಕ್ರಿಸ್ತನನ್ನು ಧರಿಸಿ ಕೊಂಡ ನಂತರ ಅವರು ತಂದೆಯ, ಮಗನ ಮತ್ತು ಪವಿತ್ರಾತ್ಮನ ಹೆಸರನ್ನು ಧರಿಸಿಕೊಂಡಿರುತ್ತಾರೆ. ಹೇಗೆಂದರೆ, ಯೇಸುಕ್ರಿಸ್ತನು ಪವಿತ್ರಾತ್ಮದ ಮೂಲಕ ಮಗನಲ್ಲಿ ತಂದೆಯನ್ನು ಪ್ರಸಿದ್ಧಪಡಿಸುವವನಾಗಿದ್ದಾನೆ. ಈ ರೀತಿಯಾಗಿ ಹೊಂದಿಕೆಯಾದವರು ಇನ್ನೆಂದಿಗೂ ಪ್ರಾಕೃತ ಮಾನವನ ಚಿತ್ತದಲ್ಲಿ ಇರುವುದಿಲ್ಲ. ಆದರೆ ''ಸ್ವನೀತಿಯನ್ನಾಶ್ರಯಿಸದೆ.... ದೇವರು ಕೊಡುವ ನೀತಿಯನ್ನೇ ಹೊಂದಿ ಕ್ರಿಸ್ತನಲ್ಲಿರುವವನಾಗಿರುತ್ತಾನೆ'' (ಫಿಲಿಪ್ಪಿ 3:9).

(ಮುಂದುವರೆಯುವದು.

—ooo(((OOO)))ooo—

## ಮೂಲ ನಂಬಿಕೆಗಳು.
(ಹಿಂದಿನ ಸಂಚಿಕೆಯಿಂದ)

6. 4ನೇ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿ ಪೌಲನು ಹೇಳುವಂತೆ ಯೇಸುಕ್ರಿಸ್ತನು ಮರಣಾಧಿಕಾರಿಯನ್ನು ಅಂದರೆ ತನ್ನ ಮರಣದಿಂದ ಸೈತಾನನನ್ನು ನಾಶಮಾಡುವುದಕ್ಕೋಸ್ಕರ ಸತ್ತನು ಎಂಬುದರಿಂದ ನಾವು ತಿಳಿದುಕೊಳ್ಳುವುದೇನು? ಪಿಶಾಚ ಅಥವಾ ಸೈತಾನನು ಯಾರು?

ಮಾನವರಲ್ಲಿನ ಪಾಪ ಮತ್ತು ಅದರ ವಿವಿಧ ರೀತಿಗಳಿಗೆ ಸತ್ಯವೇದದಲ್ಲಿ ಪಿಶಾಚ ಅಥವಾ ಸೈತಾನನೆಂಬ ಹೆಸರಿದೆ. ತನ್ನ ಬಲಿಯಿಂದ ಯೇಸುಕ್ರಿಸ್ತನು ಪಾಪವನ್ನು ತೆಗೆದು ಹಾಕಿದನು. ಪಾಪವು ಮರಣದ ಶಕ್ತಿಯಾಗಿದೆ. ಜನಪ್ರಿಯ ಮತೀಯ ನಂಬುಗೆಯಂತೆ ವೈಯುಕ್ತಿಕ ಅಮರತ್ವವುಳ್ಳ ಪಿಶಾಚನೆಂಬುವವನೊಬ್ಬನಿಲ್ಲ. ಸತ್ಯವೇದದಲ್ಲಿನ ಕೆಲವು ಸಂಖ್ಯೆಗಳ ಹಾಗೂ ಸಂಕೇತಗಳ ತಪ್ಪುಗ್ರಹಿಕೆಯ ನಂಬಿಕೆಯೇ ಇದಕ್ಕೆ ಕಾರಣವಾಗಿದೆ. ಸತ್ಯವೇದದಲ್ಲಿನ ಸೈತಾನ (ಪಿಶಾಚ)ನಿಗೆ ಅನೇಕ ಆಕಾರಗಳುಂಟು; ಆದರೆ ಅವೆಲ್ಲವುಗಳ ಮೂಲ

ತ್ತಾನೆ. ಈ ಲೋಕದ ಇಂದಿನ ರಾಜಕೀಯ ವ್ಯವಸ್ಥೆಯಲ್ಲಿ ವಿಶಾಲ ರೂಪದಲ್ಲಿರುತ್ತಾನೆ.

ಇಬ್ರಿಯ 2:14; 9:26; ರೋಮಾ 6:23; ಯಾಕೋಬ 1:14–15; 4:7;
ಇಬ್ರಿಯ 12:4; ಯೋಹಾನ 13:27; 6:70; ಅ.ಕೃ.5:3–9; ಎಫೆಸ 2:2;
1 ತಿಮೊಥೆ 5:14–15; 1:20; ಮತ್ತಾಯ 16:23; ಮಾರ್ಕ 8:33; ಲೂಕ 4:8;
1 ಥೆಸ 2:18; ಪ್ರಕ 2:12–13; 1 ಪೇತ್ರ 5:8; ಪ್ರಕ 2:10; ರೋಮಾ 16:20;
ಪ್ರಕ 12:3,17; 17:9,12; 20:2.

## ರಕ್ಷಣೆಯ ಮಾರ್ಗವನ್ನು ಕುರಿತದ್ದು.

7. ಕ್ರಿಸ್ತನ ಈ ಕಾರ್ಯದ ಹೊರತಾಗಿ ನಾವು ರಕ್ಷಿಸಲ್ಪಡಲು ಸಾಧ್ಯವೇ?

ಇಲ್ಲ. ಯೇಸುಕ್ರಿಸ್ತನಿಂದಲ್ಲದೆ ಮಾನವನಿಗೆ ರಕ್ಷಣೆಯ ಬೇರೆ ಯಾವ ಮಾರ್ಗವನ್ನೂ ದೇವರು ಒದಗಿಸಿಲ್ಲ.

ಅ.ಕೃ.4:12; ಯೋಹಾನ 14:6; 8:24; 6:13; 15:5; ಎಫೆಸ 2:12.

8. ಕ್ರಿಸ್ತನಲ್ಲಿ ಪೂರೈಸಲ್ಪಟ್ಟ ರಕ್ಷಣೆಯ ಕಾರ್ಯದೊಂದಿಗೆ ನಾವು ಯಾವ ರೀತಿಯಲ್ಲಿ ನೇರಲ್ಪಡಬಹುದು?

ಅದರಲ್ಲಿ ವಿಶ್ವಾಸವಿಡುವುದರಿಂದ. ನಮ್ಮ ವಿಶ್ವಾಸವು ನೀತಿಯೆಂದು ನಿರ್ಣಯಿಸಲ್ಪಡುತ್ತದೆ.

ರೋಮಾ 4:3,24; 5:1; 3:22.

9. ಕ್ರಿಸ್ತನ ಕಾರ್ಯದ ಪ್ರಯೋಜನ ಹೊಂದಲು ನಂಬಿಕೆಯೊಂದೇ ಸಾಕೇ?

ಇಲ್ಲ. ವಿಧೇಯತೆ ಅಥವಾ ''ಕ್ರಿಯೆ'' ಗಳಿರಬೇಕು.

ಯಾಕೋಬ 2:20–22; ಮತ್ತಾಯ 7:21; 16:27; ಪ್ರಕ 2:23;
ಮತ್ತಾ 28:20.

10. ನಂಬುವವರಿಗೆ ಯಾವ ''ಕಾರ್ಯ'' ಗಳನ್ನು ಮಾಡಲು ಆಜ್ಞಾಪಿಸಲಾಗಿದೆ ?

ಅವರು ಮಾಡಲು ಅನೇಕ ಕಾರ್ಯಗಳನ್ನು ಆಜ್ಞಾಪಿಸಲಾಗಿದೆ. ಪ್ರಥಮವಾಗಿ ಅವರು ದೀಕ್ಷಾಸ್ನಾನ ಹೊಂದಲು ಆಜ್ಞಾಪಿಸಲಾಗಿದೆ.

ಅ.ಕೃ.10:48; 22:16; 2:38; ಮಾರ್ಕ 16:16.

11. ದೀಕ್ಷಾಸ್ನಾನವೆಂದರೇನು?

ದೀಕ್ಷಾಸ್ನಾನವೆಂದರೆ ನೀರಿನಲ್ಲಿ ಹೂಣಲ್ಪಡುವುದು.

ಅ.ಕೃ. 10:47; ರೋಮಾ 6:4; ಕೊಲೊಸ್ಸೆ 2:12; ರೋಮಾ 6:5.

12. ದೀಕ್ಷಾಸ್ನಾನವು ನಮಗೆ ಏನು ಮಾಡುತ್ತದೆ ?

ಅದು ಒಬ್ಬ ವಿಶ್ವಾಸಿಯು ಕ್ರಿಸ್ತನನ್ನು ಧರಿಸಿಕೊಂಡು ತನ್ನ ಪಾಪಗಳಿಗೆ ಕ್ಷಮೆಯನ್ನು ಪಡೆಯುವಂತೆ ದೇವರು ನೇಮಿಸಿದ ಒಂದು ಕಾರ್ಯವಾಗಿದೆ.

ಗಲಾತ್ಯ 3:27; ರೋಮಾ 6:3; ಅ.ಕೃ.2:38; 22:16; 1 ಪೇತ್ರ 3:21.

> ಯಾರ ಅಪರಾಧಗಳು ಪರಿಹಾರವಾಗಿದೆಯೋ, ಯಾರ ಪಾಪಗಳು ಕ್ಷಮಿಸಲ್ಪಟ್ಟಿವೆಯೋ ಅವರೇ ಧನ್ಯರು. ಕರ್ತನು ಯಾವನ ಪಾಪವನ್ನು ಲೆಕ್ಕಕ್ಕೆ ತರುವದಿಲ್ಲವೋ ಆ ಮನುಷ್ಯನೇ ಧನ್ಯನು.
>
> — ರೋಮಾ 4:7.

**ನಿಮ್ಮ ಪತ್ರಗಳು.**

ನಿಮ್ಮ ಪತ್ರಗಳನ್ನು ಸ್ವೀಕರಿಸಲು ನಾವು ತುಂಬಾ ಆಸಕ್ತಿಯುಳ್ಳವರಾಗಿದ್ದೇವೆ. ನೀವು ನಮ್ಮ ಪತ್ರಿಕೆಗಳು, ಕರಪತ್ರ ಹಾಗೂ ಕಿರುಹೊತ್ತಗೆಗಳಿಗೆ ವಂದನೆಗಳನ್ನು ಬರೆದು ತಿಳಿಸುವಾಗ, ಅವುಗಳು ನಿಮಗೆ ತಲುಪುತ್ತಿವೆಯೆಂದು ನಾವು ತಿಳಿಯುತ್ತೇವೆ. ಅನೇಕರು ಆ ರೀತಿ ಬರೆದು ವಿವಿಧ ಕರಪತ್ರ ಕಿರುಹೊತ್ತಗೆಗಳನ್ನು ಪಡೆದಿರುತ್ತಾರೆ. ಕೆಲವರು ಬಹಳ ಕಾಲದಿಂದ ಬರೆದಿಲ್ಲ. ಅವರು ಕೂಡಲೇ ನಮಗೆ ಬರೆಯದಿದ್ದಲ್ಲಿ, ನಾವು ಇನ್ನು ಮುಂದೆ ನಮ್ಮ ಪತ್ರಿಕೆಗಳನ್ನು ಅವರಿಗೆ ಕಳುಹಿಸುವುದನ್ನು ನಿಲ್ಲಿಸಬೇಕಾಗುತ್ತದೆ. ಏಕೆಂದರೆ ಅವು ತಲುಪಿದ್ದಕ್ಕೆ ನಮಗೆ ಖಾತರಿ ಇಲ್ಲ.

**ಇತರರೊಂದಿಗೆ ಹಂಚಿಕೊಳ್ಳುವುದು.**

ನೀವು ಈ ದೈವೀಕ ಸತ್ಯವನ್ನು ತಿಳಿಯುವುದಲ್ಲದೆ ಅದನ್ನು ನಿಮ್ಮ ಬಂಧು ಮಿತ್ರರು ಹಾಗೂ ಇತರರು ತಿಳಿಯುವುದು ಅಗತ್ಯವಾಗಿದೆ. ನಿಮಗೆ ತಿಳಿದಂತ ಆಸಕ್ತರಾದ ನಿಮ್ಮ ಬಂಧು ಮಿತ್ರರಿಗೆ ಈ ವಿಷಯವನ್ನು ತಿಳಿಸಿ, ಉಚಿತವಾಗಿ ಈ ಸತ್ಯದ ತಿಳುವಳಿಕೆಯನ್ನು ಹೊಂದಲು ಅವರುಗಳ ವಿಳಾಸಗಳನ್ನು ನಮಗೆ ಕಳುಹಿಸಿ.

**ಸ್ಥಳೀಯವಾಗಿ ಸುವಾರ್ತಾ ಕೂಟಗಳು.**

ಅನೇಕರಿಗೆ ಸುವಾರ್ತೆಯಲ್ಲಿನ ಸತ್ಯವನ್ನು ತಿಳಿಯುವ ಉತ್ಸುಕತೆ ಇರಬಹುದು. ಕೆಲವರಿಗೆ ಅದನ್ನು ಪತ್ರ ಮುಖೇನ ತಿಳಿಸುವ ಸಾಮರ್ಥ್ಯ ಇಲ್ಲದಿರಬಹುದು. ಅಲ್ಲದೆ ಅಂತಹವರೆಲ್ಲರೂ ನಾವಿರುವ ಸ್ಥಳಕ್ಕೆ ಬಂದು ಸತ್ಯವನ್ನು ಕೇಳುವ ಅನುಕೂಲತೆ ಇಲ್ಲದಿರಬಹುದು. ಅಂತಹ ಸಂದರ್ಭದಲ್ಲಿ ತಮ್ಮ ತಮ್ಮ ಸ್ಥಳಗಳಲ್ಲಿಯೇ ಈ ಸತ್ಯವನ್ನು ಕೇಳುವ ಇಚ್ಛೆ ಇದ್ದಲ್ಲಿ, ನಮಗೆ ತಿಳಿಸಿದರೆ, ನಾವು ಬಂದು ಸುವಾರ್ತಾ ಕೂಟವನ್ನು ನಡೆಸುತ್ತೇವೆ. ನಮಗಾಗಿ ಯಾವ ತರವಾದ ಏರ್ಪಾಡೂ ನೀವು ಮಾಡ ಬೇಕಿಲ್ಲ. ಕೂಟವನ್ನು ನಡೆಸಲು ಸ್ಥಳವನ್ನು ಹಾಗೂ ಅದನ್ನು ಕೇಳಲು ಜನರನ್ನು ಒದಗಿಸಿದರೆ ಸಾಕು. ಯಾರಾದರೊಬ್ಬರ ಮನೆಯಲ್ಲಿ ಆದರೂ ಸಾಕು. ಆದರೆ ಕೆಲವು ದಿನಗಳ ಮುಂಚಿತವಾಗಿ ನಮಗೆ ತಿಳಿಸಬೇಕಾಗಿ ವಿನಂತಿ.



ನಮ್ಮಲ್ಲಿ ಕನ್ನಡ ಭಾಷೆಯಲ್ಲಿ ಮಾತ್ರವಲ್ಲದೆ, ತೆಲುಗು, ತಮಿಳು ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಕರಪತ್ರ / ಕಿರುಹೊತ್ತಗೆಗಳು ಉಚಿತವಾಗಿ ದೊರೆಯುತ್ತವೆ. ಪಡೆಯಲು ಬಯಸುವವರು ನಮಗೆ ಬರೆದಲ್ಲಿ ನಾವು ಉಚಿತವಾಗಿ ಕಳುಹಿಸುತ್ತೇವೆ.



ನಮ್ಮಲ್ಲಿ ತೆಲುಗು ಹಾಗೂ ಇಂಗ್ಲಿಷ್ ಭಾಷೆಗಳಲ್ಲಿ ಅಂಚೆ ಮೂಲಕ ಸತ್ಯವೇದ ಪಾಠಗಳನ್ನು ಕಳುಹಿಸಲಾಗುತ್ತದೆ. ಇಚ್ಛೆಯುಳ್ಳವರು ಉಚಿತವಾಗಿ ಪಡೆಯಬಹುದು.

ಇದಲ್ಲದೆ 15 ವರ್ಷ ವಯಸ್ಸಿನ ಮಕ್ಕಳಿಗೆ ಇಂಗ್ಲಿಷಿನಲ್ಲಿ ಅಂಚೆ ಮೂಲಕ ಸತ್ಯವೇದ ಪಾಠಗಳನ್ನು ಉಚಿತವಾಗಿ ಕಳುಹಿಸಲಾಗುವುದು. ಕೂಡಲೇ ಬರೆಯಿರಿ.

ನೀವು ನಿಮ್ಮ ಕುಟುಂಬ ಮಕ್ಕಳೊಡಗೂಡಿ ಪ್ರತಿದಿನವೂ ಸತ್ಯವೇದವನ್ನು ಓದುವ ಪರಿಪಾಠವನ್ನು ಇಟ್ಟುಕೊಳ್ಳಿರಿ. ಇದರಿಂದಾಗುವ ಆತ್ಮೀಕ ಲಾಭ ಎಷ್ಟೆಂದು ಹೇಳಲಸಾಧ್ಯ. ಉಚಿತ ದೈನಂದಿನ ಸತ್ಯವೇದ ಪಠಣ ತಃಖ್ತೆಗಾಗಿ ನಮಗೆ ಇಂದೇ ಬರೆಯಿರಿ.

ಸ್ಥಳೀಯ ವಿಳಾಸಗಳು:

ದಿ ಕ್ರಿಸ್ಟಡೆಲ್ಫಿಯನ್ಸ್,
ಕೇರ್ ಆಫ್ ಸಿಟಿ ಡ್ರಗ್ ಹೌಸ್,
ರಾಜೇಂದ್ರ ಪ್ರಸಾದ್ ರಸ್ತೆ,
ಮಂಡ್ಯ 571 401,
ಕರ್ನಾಟಕ.

ದಿ ಕ್ರಿಸ್ಟಡೆಲ್ಫಿಯನ್ಸ್,
ಜಿ.ಪಿ.ಓ. ಬಾಕ್ಸ್ 159,
ಹೈದರಾಬಾದ್ 500 001,
ಆಂಧ್ರ ಪ್ರದೇಶ.